# ಗರುಡ ಗಮನ ಬಂದನೋ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru, page No. 74.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 119.
3. **Note:** The wordings are as per Ref. 1. The wordings in Ref. 2 are fully matching with Ref. 1. The wordings followed by the singer are almost matching except few differences which are not mentioned here.
4. **Note:** The Ankita are same in both reference books above, but the singer has used a different Ankita. We have considered book in Ref.1 as standard and taken that Ankita for listing.

ರಾಗ: ಬಿಲಹರಿ ತಾಳ: ಅಟ್ಟ

ಗರುಡ ಗಮನ ಬಂದನೋ ನೋಡಿರೊ ಬೇಗ
ಗರುಡ ಗಮನ ಬಂದನೋ ॥ ಪ ॥

ಗರುಡ ಗಮನ ಬಂದ ಧರಣಿಯಿಂದೊಪ್ಪುತ
ಕರೆದು ಬಾರೆನ್ನುತ ವರಗಳ ಬೀರುತ ॥ ಅಪ ॥

ಎನ್ನ ರಕ್ಷಿಪ ದೊರೆ ಇಲ್ಲಿಗೆ ತಾ ಬಂದ
ಚಿನ್ನದೋಲ್ ಪೊಳೆವ ವಿಹಂಗ ರಥದಲಿ
ಘನ್ನ ಮಹಿಮ ಬಂದಚ್ಚಿನ್ನ ಮೂರುತಿ ಬಂದ
ಸಣ್ಣ ಕೃಷ್ಣನು ಬಂದ ಬೆಣ್ಣೆಗಳ್ಳನು ಬಂದ ॥ 1 ॥

ಪಕ್ಷಿವಾಹನ ಬಂದ ಲಕ್ಷ್ಮೀಪತಿಯು ಬಂದ
ಕುಕ್ಷಿಯೊಳೀರೇಳು ಜಗವನಿಟ್ಟವ ಬಂದ
ಸೂಕ್ಷ್ಮ - ಸ್ಥೂಲದೊಳಗಿರುವವನು ತಾ ಬಂದ
ಸಾಕ್ಷೀ ಭೂತನಾದ ಸರ್ವೇಶ್ವರ ಬಂದ ॥ 2 ॥

ತಂದೆ ಪುರಂದರ ವಿಠಲರಾಯನು ಬಂದ
ಬಂದು ನಿಂದು ನಲಿದಾಡುತಿಹ
ಅಂದು ಸಾಂದೀಪನ ನಂದನನ ತಂದಿತ್ತ
ಸಿಂಧು ಶಯನ ಆನಂದ ಮೂರುತಿ ಬಂದ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಧರಣಿ** = ಭೂದೇವಿ

**ವಿಹಂಗ ರಥ** = ಗರುಡನೇ ವಾಹನವಾದ

**ಅಚ್ಛಿನ್ನ** = ಪರಿಪೂರ್ಣ

**ಸಿಂಧುಶಯನ** = ಕ್ಷೀರಸಾಗರಶಯನ

**ವಿಹಂಗಜ** – ಗರುಡನನ್ನು ರಥವಾಗಿ ಮಾಡಿಕೊಂಡು.

**ಬಂದಭಿನ್ನ** – ಬಂದ ಅಭಿನ್ನ; ಏಕಮೇವಾದ್ವಿತೀಯ.

**ಕುಕ್ಷಿ** – ಹೊಟ್ಟೆ.

**ಸಾಕ್ಷಿಭೂತನು** – ಜಗತ್ತೆಲ್ಲವೂ ಅವನ ಲೀಲೆಯಾಗಿ, ಅದರ ವ್ಯಾಪಾರದಿಂದ ಲಿಪ್ತನಾಗದೆ ಇರುವ ಭಾವ.

**ಸಾಂದೀಪನಿ** = ಕಾಶ್ಯ ಕುಲದ ಬ್ರಾಹ್ಮಣ. ಆವಂತಿಯಲ್ಲಿ ವಾಸವಾಗಿದ್ದ. ಬಲರಾಮ, ಕೃಷ್ಣ, ಸುಧಾಮರಿಗೆ ವಿದ್ಯಾ ಕಲಿಸಿದ ಗುರುಗಳು. ಗುರುದಕ್ಷಿಣೆಯಾಗಿ ತೀರಿದ ತನ್ನ ಮಗನನ್ನು ತರಬೇಕೆಂದು ಗುರುಗಳು ಶ್ರೀಕೃಷ್ಣನಿಗೆ ಹೇಳಿದರು. ಸಮುದ್ರ ಪ್ರವೇಶಿಸಿ, ಗುರುಪುತ್ರನನ್ನು ಕದ್ದ ಪಂಚಜನನೆಂಬ ರಾಕ್ಷಸನನ್ನು ಕೊಂದು, ಅಲ್ಲಿ ಅವನನ್ನು ಕಾಣದೆ ಯಮಲೋಕಕ್ಕೆ ಹೋಗಿ ಸಾಂದೀಪನ ಮಗನನ್ನು ತಂದು ಒಪ್ಪಿಸಿದರು. (ಭಾಗವತ ೧೦)

**Classification:** Keerthane
**Ankita:** tande purandara vittala
**Location:** NA
**Category:** Pooja Tatva

**Sub-Category:** garuda, bhumi, bangara, krishna, benne, pakshi, Vishnu, arasa, loka, deha, sandipani, Ananda,
**Pravachana:** NA
**Explanation:** NA